ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ದಿನಾಂಕ 4-1-1993ರ ಲಿಖಿತ ಮೂಲಕ ಉತ್ತರಿಸುವ 6ನೇ ಪಟ್ಟಿಯಲ್ಲಿರುವ 88 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 518, 556, 912, 664, 803, 954, 1012, 1013, 1000, 1058, 110, 133, 239, 863, 338 ಎ 357, 359, 360, 371, ಹಾಗೂ 804 ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 68 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ರಸ್ತೆಗಳ ಅವ್ಯವಸ್ಥೆ

427 - ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರಸ್ತೆಗಳು ತೀರಾ ಹದಗೆಟ್ಟ ಸ್ಥಿತಿಯಲ್ಲಿದ್ದು ವಾಹನಗಳು ಓಡಾಡುವುದಕ್ಕೆ ಅಡಚಣೆ ಉಂಟಾಗುತ್ತಿರುವುದರಿಂದ ಅಪಘಾತಗಳು ಹೆಚ್ಚಾಗಿ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಶಾಶ್ವತ ವ್ಯವಸ್ಥೆಯೊಂದನ್ನು (ರಾಷ್ಟ್ರೀಯ ಹೆದ್ದಾರಿಯಲ್ಲಿರುವಂತೆ) ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಮಾದರಿಯಲ್ಲೇ ದುರಸ್ತಿಗೊಳಿಸುವ ಯೋಜನೆ ಸರ್ಕಾರಕ್ಕೆ ಏನಾದರೂ ಇದೆಯೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ರಾಜ್ಯದ ಎಲ್ಲಾ ರಸ್ತೆಗಳು ತೀರಾ ಹದಗೆಟ್ಟಿವೆ ಎಂದು ಹೇಳ ಬರುವುದಿಲ್ಲ. ಇತ್ತೀಚಿನ ಅತಿವೃಷ್ಟಿಯಿಂದಲೂ ಹಾಗೂ ಚಂಡಮಾರುತದಿಂದ ಆದ ಮಳೆಯಿಂದಲೂ ಸುಮಾರು 3230 ಕಿ.ಮೀ. ರಸ್ತೆಗಳು ಹಾನಿಗೊಳಗಾಗಿದೆ. ಇದರಿಂದಲೇ ಅಡಚಣೆ ಉಂಟಾಗಿ ಅಪಘಾತ ಹೆಚ್ಚಾಗಿವೆ ಎಂದೂ ಹೇಳಲಾಗುವುದಿಲ್ಲ.

ಆ) ರಸ್ತೆಗಳ ಸಾಮಾನ್ಯ ನಿರ್ವಹಣೆಗೆ ಹಾಗೂ ಪ್ರತಿ ಆರು ವರ್ಷಗಳಿಗೊಮ್ಮೆ ಯೋಜನಾಬದ್ಧವಾಗಿ ಮಾಡಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಅನುದಾನವನ್ನು ವೈಜ್ಞಾನಿಕವಾಗಿ ನಿರ್ದಿಷ್ಟಪಡಿಸುವಂತೆ ಹಾಗೂ ಸೂಕ್ತ ಶಿಫಾರಸ್ಸು ಮಾಡುವಂತೆಯೂ ಮತ್ತು ಈ ಬಗ್ಗೆ ಸೂಕ್ತ ನಿಯಮಾವಳಿ ರೂಪಿಸುವಂತೆಯು ಕೇಂದ್ರ ಸರ್ಕಾರವು ನೇಮಿಸಿರುವ 10ನೇ ಆರ್ಥಿಕ ಆಯೋಗದ ಮುಂದೆ ಬೇಡಿಕೆ ಮಂಡಿಸಲಾಗುತ್ತಿದೆ. ಈ ಬಗ್ಗೆ ಪ್ರಾಥಮಿಕ ಚರ್ಚೆಯನ್ನೂ ಸಹ ಆರ್ಥಿಕ ಆಯೋಗದ ಸದಸ್ಯರೊಡನೆ ಮಾಡಲಾಗಿದ್ದು ಈ ಬಗ್ಗೆ ವೈಜ್ಞಾನಿಕವಾದ ಶಾಶ್ವತ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ.

ಇ) ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಬೇರೆ ಬೇರೆ ಅಳತೆಗೋಲು (ಸ್ಟ್ಯಾಂಡರ್ಡ್) ನಿಗಧಿಪಡಿಸಿರುವುದರಿಂದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ವ್ಯವಸ್ಥೆಗೊಳಿಸಲು ಯಾವ ನಿರ್ದಿಷ್ಟ ಯೋಜನೆಗಳಿರುವುದಿಲ್ಲ.